# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 800 |
| 2 | ಸದಸ್ಯರ ಹೆಸರು | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 11.03.2020 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಆಕಾರ್‌ಬಂದ್ ಮತ್ತು ಟಿಪ್ಪಣಿಗಳ ರಕ್ಷಣೆಗೆ/ಸಂರಕ್ಷಣೆಗೆ ಯಾವ ಕ್ರಮಗಳನ್ನು ಕೈಗೊಂಡಿದೆ; (ವಿವರ ನೀಡುವುದು) | ಭೂಮಾಪನ ಇಲಾಖೆಯ ಅಮೂಲ್ಯ ಭೂದಾಖಲೆಗಳಾದ ಟಿಪ್ಪಣಿ ಸಹಿತ ಇತರೆ ಒಟ್ಟು 9 ತರಹೆಯ ಭೂದಾಖಲೆಗಳನ್ನು ಅಧುನಿಕ ತಂತ್ರಜ್ಞಾನದ ಮೂಲಕ ಸಂರಕ್ಷಿಸುವ ನಿಟ್ಟಿನಲ್ಲಿ 2010 ನೇ ಸಾಲಿನಲ್ಲಿಯೇ ರಾಜ್ಯಾದ್ಯಂತ **ಭೂದಾಖಲೆಗಳ ಸ್ಕ್ಯಾನಿಂಗ್** ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. ಸುಮಾರು ನಾಲ್ಕು ಕೋಟಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸಲಾಗಿರುತ್ತದೆ.<br>ಆಕಾರಬಂದ್ ದಾಖಲೆಯ ಸಂರಕ್ಷಣೆಗಾಗಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಡಳಿತದ ಮೂಲಕ ಗಣಕೀಕರಣ ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ. ಡಾಟಾ ಎಂಟ್ರಿ ಕಾರ್ಯದ ಪರಿಶೀಲನಾ ಕಾರ್ಯವು ಪ್ರಗತಿಯಲ್ಲಿರುತ್ತದೆ. |
| ಆ) | ಸಾರ್ವಜನಿಕರಿಗೆ ಆರ್.ಟಿ.ಸಿ. ಗಳನ್ನು ವಿತರಿಸುವ ರೀತಿ ಆಕಾರ್‌ಬಂದ್ ಟಿಪ್ಪಣಿಗಳನ್ನು ವಿತರಿಸಲಾಗುತ್ತಿದೆಯೇ ಇಲ್ಲದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; | ಹೌದು<br>ಸ್ಕ್ಯಾನಿಂಗ್ ಆಗಿರುವ ಭೂದಾಖಲೆಗಳನ್ನು ಸ್ಟೇಟ್ ಡಾಟಾ ಸೆಂಟರ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಸಾರ್ವಜನಿಕರ ಕೋರಿಕೆ ಮೇರೆಗೆ ಆರ್.ಟಿ.ಸಿ ಗಳನ್ನು ವಿತರಿಸುವ ರೀತಿಯಲ್ಲಿ ರಾಜ್ಯದ ಎಲ್ಲಾ ಕಂದಾಯಾಧಿಕಾರಿಗಳ ಕಚೇರಿ/ನಾಡ ಕಚೇರಿ/ಅಟಲ್‌ಜಿ ಜನಸ್ನೇಹಿ ಕೇಂದ್ರಗಳ ಕೌಂಟರ್ ಮೂಲಕ ವಿತರಿಸಲು ಕ್ರಮಕೈಗೊಳ್ಳಲಾಗಿರುತ್ತದೆ.<br>ಇನ್ನು ಆಕಾರಬಂದ್ ಗಣಕೀಕರಣ ಕಾರ್ಯವು ಪ್ರಗತಿಯಲ್ಲಿರುವುದರಿಂದ ತದನಂತರ ಈ ದಾಖಲೆಯನ್ನು ಸಹ ಗಣಕಯಂತ್ರದ ಮೂಲಕ ಕೋರಿಕೆ ಸ್ವೀಕೃತಿಯಾದ ಕೂಡಲೇ Generate ಮಾಡಿ ತ್ವರಿತವಾಗಿ ವಿತರಿಸಲು ಉದ್ದೇಶಿಸಲಾಗಿರುತ್ತದೆ. |

**ಸಂಖ್ಯೆ: ಕಂಇ 47 ಎಸ್‌ಎಸ್‌ಸಿ 2020**

**(ಆರ್. ಅಶೋಕ)**
ಕಂದಾಯ ಸಚಿವರು